# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

## ಶಾಸನ ಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.

www.souharda.coop, Ph: 080-23378375-80, E-mail: souharda@souharda.coop


**ಸಂಖ್ಯೆ : ಸಂಸ/ಶಿವಿ/ತ–6/01/2018–19** **ದಿನಾಂಕ: 25.07.2018**

**ಇವರಿಗೆ,**

ಮಾನ್ಯ ಮುಖ್ಯ ಕಾರ್ಯನಿರ್ವಾಹಕರು,

**ಮಾನ್ಯರೇ,**

**ವಿಷಯ :** ಬೆಂಗಳೂರು ವಿಭಾಗದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಉನ್ನತ ಕಾರ್ಯಕ್ಷಮತೆ ತರಬೇತಿ" **(High tech Training)** ದಿನಾಂಕ 08 & 09 ಆಗಸ್ಟ್ 2018.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಶಾಸನಬದ್ಧವಾಗಿ ರಚನೆಗೊಂಡು, ಅರೆನ್ಯಾಯಿಕ ಅಧಿಕಾರ(Quasi Judicial)ವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿದೆ. ಈ ಕಾಯ್ದೆಯಡಿಯಲ್ಲಿ 4352 ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಒಂದು ಹೊಸ ಚೈತನ್ಯವನ್ನು ನೀಡಿರುವ ಕ್ಷೇತ್ರ ಇದಾಗಿದೆ. ಈ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಪ್ರಸ್ತುತ ರಾಜ್ಯದ ಸೌಹಾರ್ದ ಸಹಕಾರಿಗಳು ಇನ್ನೂ ಉತ್ತಮವಾಗಿ ಕಾರ್ಯನಿರ್ವಹಿಸಿ ಹೆಚ್ಚಿನ ಅಭಿವೃದ್ಧಿ ಪಥದಲ್ಲಿ ಮುಂದುವರಿಯಬೇಕು ಎಂಬ ಉದ್ದೇಶದಿಂದ, ಬೆಂಗಳೂರು ವಿಭಾಗದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ 2 ದಿನಗಳ ತರಬೇತಿಯನ್ನು **ದಿನಾಂಕ 08 & 09 ಆಗಸ್ಟ್ 2018 ಕಣ್ವ ಸ್ಟಾರ್ ರೆಸಾರ್ಟ್, ಹಿಮಾಲಯ ಡಗ್ಸ್, ಎದುರು, ಗೋಲ್ಡನ್ ಸ್ಪಾ ಹತ್ತಿರ, ಬೆಂಗಳೂರು ತುಮಕೂರು ಹೆದ್ದಾರಿ, ಹುಸ್ಕೂರು ರಸ್ತೆ, ಎಪಿಎಂಸಿ ಮಾರ್ಕೆಟ್ ಪಕ್ಕ, ಬೆಂಗಳೂರು** ಇಲ್ಲಿ **"ಉನ್ನತ ಕಾರ್ಯಕ್ಷಮತೆ ತರಬೇತಿ" (High tech Training)**ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಹಕಾರ ಕ್ಷೇತ್ರದಲ್ಲಿ ನೀವು ಓರ್ವ ಉತ್ತಮ ಕ್ರಿಯಾಶೀಲ ಮುಖ್ಯಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸಲು ಈ ತರಬೇತಿ ಕಾರ್ಯಕ್ರಮ ಸಹಕಾರಿಯಾಗಲಿದೆ. ಆದ್ದರಿಂದ ತಾವು ಈ ಕಾರ್ಯಕ್ರಮದ ಪ್ರಯೋಜನ ಪಡೆಯಲು ಕೋರಿದೆ. ತಮ್ಮ ಭಾಗವಹಿಸುವಿಕೆಯನ್ನು ಲಗತ್ತಿಸಿದ ಫಾರ್ಮನಲ್ಲಿ ಭರ್ತಿಮಾಡಿ ಕಳುಹಿಸುವ ಮೂಲಕ ಧೃಡೀಕರಿಸಲು ಕೋರಿದೆ.

| | |
|---|---|
| **ಕಾರ್ಯಕ್ರಮದ ವಿವರಗಳು ಈ ರೀತಿ ಇವೆ.** | |
| **ಕಾರ್ಯಕ್ರಮದ ದಿನಾಂಕ** | : 08 & 09 ಆಗಸ್ಟ್ 2018 |
| **ಕಾರ್ಯಕ್ರಮದ ಸ್ಥಳ** | : ಕಣ್ವ ಸ್ಟಾರ್ ರೆಸಾರ್ಟ್, ಹಿಮಾಲಯ ಡಗ್ಸ್ ಎದುರು, ಗೋಲ್ಡ್ ನ್ ಸ್ಪಾ ಹತ್ತಿರ, ಬೆಂಗಳೂರು ತುಮಕೂರು ಹೆದ್ದಾರಿ, ಹುಸ್ಕೂರು ರಸ್ತೆ, ಎಪಿಎಂಸಿ, ಮಾರ್ಕೆಟ್ ಪಕ್ಕ, ಬೆಂಗಳೂರು |
| **ಕಾರ್ಯಕ್ರದ ಅವಧಿ ಹಾಗೂ ಸಮಯ** | : ಬೆಳಿಗ್ಗೆ 10:00 ರಿಂದ ಸಂಜೆ 5:30 ರವರೆಗೆ 2 ದಿನಗಳು ಪೂರ್ಣ. |
| **ಪ್ರತಿನಿಧಿಗಳ ಸಂಖ್ಯೆ** | : 60 ಜನರಿಗೆ ಮಾತ್ರ ಸೀಮಿತ |
| **ಊಟ & ವಸತಿ** | : ಒಬ್ಬರಿಗೆ ತಲಾ. ರೂ 1000/-(ಎರಡು ದಿನಗಳಿಗೆ ಸೇರಿ-ಸಾಂಕೇತಿಕ ವೆಚ್ಚ) |

**ದಯವಿಟ್ಟು ಸೂಚನೆಗಳನ್ನು ಗಮನಿಸಿ**

- ಮೊದಲು ನೋಂದಾಯಿಸಿದವರಿಗೆ ಮೊದಲ ಆದ್ಯತೆ.
- ಪೂರ್ಣ **2** ದಿನಗಳು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸುವ ಮಾನಸಿಕ ಸಿದ್ಧತೆ ಅವಶ್ಯ.
- ಮೊದಲು ಬಂದ **60** ಜನರಿಗೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.
- ತರಬೇತಿ ಅವಧಿಯಲ್ಲಿ **ಕಣ್ವ ಸ್ಟಾರ್ ರೆಸಾರ್ಟ್, ಇದರ** ನಿಯಮ ಹಾಗೂ ವ್ಯವಸ್ಥೆಗಳಿಗೆ ಬದ್ಧರಾಗಿರುವುದು.
- ಈ ಪತ್ರದ ಜೊತೆಯಲ್ಲಿ ಲಗತ್ತಿಸಿದ ನಮೂನೆಯಲ್ಲಿ ಭಾಗವಹಿಸುವ ಪ್ರತಿನಿದಿಗಳ ವಿವರ ನಮೂನೆಯನ್ನು ಕಳುಹಿಸುವುದು.
- ತರಬೇತಿಯ ನೋಂದಣಿ ಶುಲ್ಕವನ್ನು **"ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,"** ಬೆಂಗಳೂರು ಇದರ ಹೆಸರಿನಲ್ಲಿ ಚೆಕ್/ಡಿಡಿಯನ್ನು ಕಳುಹಿಸುವ ಮೂಲಕ ಪಾವತಿಸುವುದು. ಚೆಕ್ ನಗದೀಕರಣ ನಂತರ ರಸೀದಿಯನ್ನು ಕಳುಹಿಸಲಾಗುವುದು.
- ಭಾಗವಹಿಸುವಿಕೆಯನ್ನು ನೋಂದಾಯಿಸಿಕೊಳ್ಳುವ ಕೊನೆಯ ದಿನಾಂಕ **03.08.2018**

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**

**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕ**